# ಬೇಸಿಗೆ ಎದುರಿಸಲು ಸಿದ್ಧರಾಗಿ

ಮಹಾರಾಷ್ಟ್ರದಲ್ಲಿ ಬಿಸಿಗಾಳಿಗೆ ಈಗಾಗಲೇ ಇಬ್ಬರು ಬಲಿಯಾಗಿರುವ ವರದಿ ಬಂದಿದೆ. ಕಳೆದ ವರ್ಷ ಮೇ ತಿಂಗಳಲ್ಲಿ ನಮ್ಮ ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಉಷ್ಣತೆ 45 ಡಿಗ್ರಿ ಸೆಲ್ಸಿಯಸ್ ದಾಟಿತ್ತು. ಬೆಂಗಳೂರು ಮತ್ತು ಬೀದರ್‌ಗಳಲ್ಲೂ ಈ ಸಲ ಸೆಕೆವಿಪರೀತ ಹೆಚ್ಚಿದೆ. ಮಾರ್ಚ್ ತಿಂಗಳಲ್ಲೇ ವಾತಾವರಣ ಇಷ್ಟೊಂದು ಬಿಸಿಯೇರಿದರೆ ಇನ್ನು ಏಪ್ರಿಲ್– ಮೇ ತಿಂಗಳಲ್ಲಿ ಜನರು ಬದುಕುವುದು ಹೇಗೆ?




ಬಿಸಿಲಿನ ಬೇಗೆ ಒಂದೇ ಸಮನೆ ಏರುತ್ತಿದೆ. ಕರ್ನಾಟಕದಲ್ಲಿ ಫೆಬ್ರುವರಿ ತಿಂಗಳೆಂದರೆ ಅಂತಹ ಬಿಸಿಲಿನ ಬೇಗೆಯ ತಿಂಗಳಲ್ಲ. ಆದರೆ ಈ ಸಲ ಫೆಬ್ರುವರಿಯಲ್ಲೇ ಉಷ್ಣತೆ 34–36 ಡಿಗ್ರಿ ಸೆಲ್ಸಿಯಸ್‌ಗೆ ಏರಿತ್ತು. ಮಾರ್ಚ್‌ನಲ್ಲಂತೂ ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಬಿಸಿಲಿನ ಝಳ ತೀವ್ರವಾಗಿದ್ದು , 40 ಡಿಗ್ರಿ ದಾಟಿದೆ. ಯಾದಗಿರಿ, ಕಲಬುರಗಿ, ಬಳ್ಳಾರಿ, ವಿಜಯಪುರ, ರಾಯಚೂರು, ಕೊಪ್ಪಳ ಜಿಲ್ಲೆಗಳಲ್ಲಿ ಮಾರ್ಚ್ ಕೊನೆಯ ವೇಳೆಗೆ 42–43 ಡಿಗ್ರಿ ಉಷ್ಣತೆ ದಾಖಲಾಗಿದ್ದು ಜನರಿಗೆ ಈ ವರ್ಷದ ಸೆಖೆ ಭಯ ಹುಟ್ಟಿಸಿದೆ. ಜನರು ಹಗಲಲ್ಲಿ ಮಾತ್ರವಲ್ಲ, ರಾತ್ರಿ ವೇಳೆಯಲ್ಲೂ ವಿಪರೀತ ಸೆಕೆಯನ್ನು ಅನುಭವಿಸುತ್ತಿದ್ದಾರೆ. ಸಾಮಾನ್ಯವಾಗಿ ಬೇಸಿಗೆಯಲ್ಲೂ ಸಹನೀಯವೆಂಬಂತೆ ಇರುವ ಬೆಂಗಳೂರು ಮತ್ತು ಬೀದರ್‌ಗಳಲ್ಲೂ ಈ ಸಲ ಸೆಕೆ ವಿಪರೀತ ಹೆಚ್ಚಿದೆ. ಮಾರ್ಚ್ ತಿಂಗಳಲ್ಲೇ ವಾತಾವರಣ ಇಷ್ಟೊಂದು ಬಿಸಿಯೇರಿದರೆ ಇನ್ನು ಏಪ್ರಿಲ್– ಮೇ ತಿಂಗಳಲ್ಲಿ ಜನರು ಬದುಕುವುದು ಹೇಗೆ ಎನ್ನುವುದೀಗ ಚಿಂತೆ ಹುಟ್ಟಿಸುವ ವಿಷಯವಾಗಿದೆ. ‘ಹಗಲಲ್ಲಿ ಮಾತ್ರವಲ್ಲ, ರಾತ್ರಿಯಲ್ಲೂ ವಿಪರೀತ ಧಗೆ ಇದ್ದು, ಫ್ಯಾನ್‌ಗಳಿಂದಲೂ ಯಾವುದೇ ಉಪಯೋಗವಾಗುತ್ತಿಲ್ಲ’ ಎನ್ನುವುದು ಜನರ ನೋವಿನ ನುಡಿಗಳು. ಈ ಮಧ್ಯೆ ನೆರೆಯ ಮಹಾರಾಷ್ಟ್ರದಲ್ಲಿ ಬಿಸಿಗಾಳಿಗೆ ಈಗಾಗಲೇ ಇಬ್ಬರು ಬಲಿಯಾಗಿರುವ ವರದಿ ಬಂದಿದೆ. ಕಳೆದ ವರ್ಷ ಮೇ ತಿಂಗಳಲ್ಲಿ ನಮ್ಮ ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಉಷ್ಣತೆ 45 ಡಿಗ್ರಿ ಸೆಲ್ಸಿಯಸ್ ದಾಟಿತ್ತು. ಈ ವರ್ಷ ಎಷ್ಟಾಗುತ್ತೋ?

ದೇಶದಾದ್ಯಂತ ಪರಿಸ್ಥಿತಿ ಹೀಗೆಯೇ ಇದೆ. ರಾಜಸ್ತಾನ ಮತ್ತು ಮಧ್ಯಪ್ರದೇಶದ ಕೆಲವು ಪ್ರದೇಶಗಳಲ್ಲಿ ಕಳೆದ ವರ್ಷಕ್ಕಿಂತ 7 ಡಿಗ್ರಿಯಷ್ಟು ಹೆಚ್ಚು ಉಷ್ಣತೆ ಈಗಾಗಲೆ ದಾಖಲಾಗಿದೆ. ಉತ್ತರ ಪ್ರದೇಶ, ಗುಜರಾತ್, ಒಡಿಶಾಗಳಲ್ಲಿ ಬಿಸಿಗಾಳಿಯ ಅಬ್ಬರ ಶುರುವಾಗಿದೆ. ದಕ್ಷಿಣದ ತಮಿಳ್ನಾಡಿನಲ್ಲಿ ಈಗಾಗಲೆ ತೀವ್ರ ಬರಗಾಲದ ಮುನ್ಸೂಚನೆಗಳು ಸ್ಪಷ್ಟವಾಗಿವೆ. ಬಿಸಿಲ ಬೇಗೆ ಹೆಚ್ಚಾದಷ್ಟೂ ನೀರಿಗೆ ತತ್ವಾರ ಹೆಚ್ಚು. ಹಲವು ರಾಜ್ಯಗಳಲ್ಲಿ ಕೆರೆಗಳ ಪುನಶ್ಚೇತನ ನಡೆಸುವ ‘ಭಗೀರಥ’ ಯತ್ನಗಳ ಹೊರತಾಗಿಯೂ ಕೆರೆಗಳು ಕಣ್ಮರೆಯಾಗುತ್ತಿವೆ. ಜಲಸಂಪನ್ಮೂಲ ಇಲಾಖೆಯ ಅಂಕಿ ಅಂಶಗಳ ಪ್ರಕಾರ, ದೇಶಾದ್ಯಂತ 85,807 ಕೆರೆಗಳು ಬಳಕೆಯಲ್ಲಿಲ್ಲ; ಅದರಲ್ಲಿ 8152 ಕೆರೆಗಳು ಪೂರ್ಣ ಬತ್ತಿಹೋಗಿವೆ.

‘ಜಲ ದಿನಾಚರಣೆ’ಯ ಹೊರತಾಗಿಯೂ ನಮ್ಮಲ್ಲಿ ನೀರಿನ ಸಂಪನ್ಮೂಲಗಳನ್ನು ರಕ್ಷಿಸುವ ಮನೋಭಾವ ಬೆಳೆದಿಲ್ಲ. ಹಳ್ಳಿಗಳಲ್ಲಿ ಕೆರೆಕಟ್ಟೆಗಳನ್ನು ರಕ್ಷಿಸುವಲ್ಲಿ ಸರ್ಕಾರವನ್ನೇ ನಂಬಿ ಕುಳಿತುಕೊಳ್ಳುವ ಬದಲು, ಜನರು ಸ್ವಯಂಪ್ರೇರಿತ ಸಾಮೂಹಿಕ ಶ್ರಮದಾನಗಳಲ್ಲಿ ಭಾಗವಹಿಸಬೇಕು. ನಮ್ಮ ಚಿತ್ರನಟ ಯಶ್ ಉತ್ತರ ಕರ್ನಾಟಕದ ಕೆಲವು ಹಳ್ಳಿಗಳಲ್ಲಿ ಈ ರೀತಿಯ ಪ್ರಯತ್ನಗಳಲ್ಲಿ ತೊಡಗಿದ್ದು ಎಲ್ಲರಿಗೂ ಮೇಲ್ಪಂಕ್ತಿ ಹಾಕಿಕೊಟ್ಟಿದ್ದಾರೆ. ‘ಕೇವಲ ಸಿನಿಮಾಗಳಲ್ಲಿ ಜನೋಪಯೋಗಿ ದೃಶ್ಯಗಳನ್ನು ತೋರಿಸಿದರೆ ಸಾಲದು; ನಿಜಜೀವನದಲ್ಲೂ ಅಂತಹ ಕೆಲಸಗಳಲ್ಲಿ ಭಾಗವಹಿಸಬೇಕು’ ಎಂಬ ಸಂದೇಶ ನೀಡಿರುವ ಯಶ್ ಅವರ ಶ್ರಮ ಅಭಿನಂದನಾರ್ಹ. ಈ ಪ್ರಯತ್ನ ಉಳಿದವರಿಗೂ ಮಾದರಿಯಾಗಬೇಕು. ಸರ್ಕಾರವೂ ಇಂತಹ ಯತ್ನಗಳನ್ನು ಬೆಂಬಲಿಸಬೇಕು.

ನಮ್ಮಲ್ಲಿ ನಗರ ಪ್ರದೇಶಗಳಲ್ಲಿ ನೀರಿನ ಪೋಲು ಹೆಚ್ಚು. ನೀರಿನ ಸಮರ್ಪಕ ಬಳಕೆಯ ಕುರಿತು ಎಳವೆಯಲ್ಲೇ ಮಕ್ಕಳಿಗೆ ಸೂಕ್ತ ಶಿಕ್ಷಣ ಮತ್ತು ತರಬೇತಿ ನೀಡುವ ಅಗತ್ಯವಿದೆ. ಶಾಲೆ– ಕಾಲೇಜುಗಳಲ್ಲಿ ನೀರಿನ ಸದ್ಬಳಕೆಗೆ ಸೂಕ್ತ ಮಾರ್ಗದರ್ಶನ ನೀಡಬೇಕಿದೆ. ಎಲ್ಲಕ್ಕಿಂತ ಮುಖ್ಯವಾಗಿ ಸದ್ಯ ಈ ಸಲದ ಬೇಸಿಗೆಯ ತೀವ್ರತೆಯನ್ನು ಎದುರಿಸಲು ಸರ್ಕಾರವೂ ಹಲವು ಕ್ರಮಗಳನ್ನು ಕೈಗೊಳ್ಳಬೇಕಿದೆ. ಯೋಜನೆಗಳ ಹೆಸರಿನಲ್ಲಿ ಮರಗಳ ಹನನಕ್ಕೆ ತಡೆಯೊಡ್ಡುವುದು, ಸಾರ್ವಜನಿಕ ತಂಪು ಪ್ರದೇಶಗಳ ಸಂಖ್ಯೆಯನ್ನು ಹೆಚ್ಚಿಸುವುದು, ವಿದ್ಯುತ್ ಪೂರೈಕೆ ಕಡಿತವಾಗದಂತೆ ನೋಡಿಕೊಳ್ಳುವುದು, ನೀರು ಪೂರೈಕೆಯ ಸಮರ್ಪಕ ನಿರ್ವಹಣೆ, ನೀರು ಪೋಲು ಮಾಡುವವರಿಗೆ ನಿರ್ದಾಕ್ಷಿಣ್ಯವಾಗಿ ದಂಡ ವಿಧಿಸುವುದು ಮುಂತಾದ ಕ್ರಮಗಳು ಈ ನಿಟ್ಟಿನಲ್ಲಿ ಅತ್ಯವಶ್ಯ. ಅತಿಬೇಸಿಗೆಯ ರೋಗಗಳಿಗೆ ತಕ್ಷಣ ಸೂಕ್ತ ಚಿಕಿತ್ಸೆ ದೊರೆಯುವಂತೆ ಆರೋಗ್ಯ ಇಲಾಖೆಯೂ ಕಟ್ಟೆಚ್ಚರ ವಹಿಸಬೇಕು. ಬಿಸಿಲಿನ ಬೇಗೆ ಮಾರಣಾಂತಿಕವಾಗದಂತೆ ನೋಡಿಕೊಳ್ಳಬೇಕು.

★ ಬಿ.ಎಂ.ಹನೀಫ್